## ಸಂಯುಕ್ತಾ ಸರ್ಕಸ್!

'ಕಿರಿಕ್ ಪಾರ್ಟಿ' ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪರಿಚಿತರಾದ ಹುಡುಗಿ ಸಂಯುಕ್ತಾ ಹೆಗಡೆ. ನಂತರದ ದಿನಗಳಲ್ಲಿ ಅವರು ತಮ್ಮ ಚಿತ್ರದ ಶೀರ್ಷಿಕೆಯನ್ನು ವ್ಯಕ್ತಿತ್ವದ ಅನ್ವರ್ಥವನ್ನೂ ಆಗಿಸಿಕೊಂಡರು. ಸಂಯುಕ್ತಾ ತಮ್ಮ ನಟನೆಗಿಂತ 'ಕಿರಿಕ್'ಗಳ ಮೂಲಕ, 'ಡೋಂಟ್ ಕೇರ್' ವರ್ತನೆಯ ಮೂಲಕ ಸುದ್ದಿಯಾಗಿದ್ದೇ ಹೆಚ್ಚು.

ಮೊದಲ ಸಿನಿಮಾದಲ್ಲಿ ಸಿಕ್ಕಿದ ಯಶಸ್ಸನ್ನು ಕಿರಿಟವನ್ನಾಗಿಸಿಕೊಂಡೇ ಅವರು ರಾಷ್ಟ್ರೀಯ ವಾಹಿನಿಯೊಂದರ ರಿಯಾಲಿಟಿ ಷೋನಲ್ಲಿಯೂ ಭಾಗವಹಿಸಿ ಬಂದರು. ನಂತರ ನೆರೆಭಾಷೆಯ ಚಿತ್ರವೊಂದರಲ್ಲಿ ಅವಕಾಶ ಸಿಕ್ಕು ಎಂಬ ಕಾರಣಕ್ಕೆ ಕನ್ನಡದಲ್ಲಿ ಈಗಾಗಲೇ ಒಪ್ಪಿಕೊಂಡಿದ್ದ ಎರಡು ಸಿನಿಮಾಗಳಿಗೆ 'ನಕ್ಕೋ' ಎನ್ನುವುದರ ಮೂಲಕ ವಿವಾದವನ್ನು ಮೈಗೆಳೆದುಕೊಂಡರು. ಈ ಕುರಿತು ಚರ್ಚೆ ಜೋರಾಗುತ್ತಿದ್ದ ಹಾಗೆಯೇ 'ನಾನು ಹಾಗೆ ಹೇಳಿಯೇ ಇಲ್ಲ. ನನಗೆ ಕನ್ನಡ ಸಿನಿಮಾಗಳೇ ಮುಖ್ಯ. ಅದನ್ನು ಬಿಟ್ಟು ನಾನು ಬೇರೆ ಭಾಷೆಗಳಿಗೆ ಹೋಗಲಾರೆ. ನನ್ನ ಮೇಲೆ ಅನಗತ್ಯವಾಗಿ ಆರೋಪ ಮಾಡಲಾಗುತ್ತಿದೆ' ಎಂದು ಕಣ್ಣೀರು ಹಾಕಿದರು.

ಒಲ್ಲದ ಮನಸ್ಸಿನಿಂದಲೇ 'ಕಾಲೇಜ್ ಕುಮಾರ'ದಲ್ಲಿ ನಟಿಸಿದ ಅವರು ಮತ್ತೆ ಪ್ರಚಾರ ಸಂದರ್ಭದಲ್ಲಿ ಚಿತ್ರತಂಡದೊಂದಿಗೆ ಮುನಿಸಿಕೊಂಡರು. ಈ ಮಧ್ಯೆ ಕಿರುತೆರೆಯ ಬಿಗ್‌ಬಾಸ್ ಮನೆಗೆ ಹೋಗಿ ಅಲ್ಲಿಯೂ ಸ್ಪರ್ಧಿಯೊಬ್ಬರ ಮೇಲೆ ಹಲ್ಲೆ ಮಾಡಿ ಸುದ್ದಿಯಾದರು.

ಹೀಗೆ ನಟನೆಯ ಹೊರತಾದ ಕಾರಣದಿಂದಲೇ ಸುದ್ದಿಯಾಗುತ್ತಿರುವ ಸಂಯುಕ್ತಾ ಕೈಯಲ್ಲೀಗ ಹೆಚ್ಚು ಅವಕಾಶಗಳು ಇದ್ದಂತಿಲ್ಲ. ಈ ಬಿಡುವಿನ ಸಮಯದಲ್ಲಿ ಅವರು ದೇಹದಂಡನೆಗೆ ಇಳಿದಿದ್ದಾರೆ. ಮೈಯನ್ನು ಹೇಗೆಂದರೆ ಹಾಗೆ ಬಾಗಿ ಬಳುಕಿಸಿ, ಬೆಂಡಾಗಿಸಿಕೊಂಡ, ತಲೆಕೆಳಗಾಗಿ ನಿಂತುಕೊಂಡ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುತ್ತಿದ್ದಾರೆ. ರೈಲ್ವೆ ಟ್ರ್ಯಾಕ್, ರಸ್ತೆಬದಿಯ ಗೋಡೆ, ಜಿಮ್ ಎಲ್ಲೆಂದರಲ್ಲಿ ಚಿತ್ರವಿಚಿತ್ರ ಭಂಗಿಗಳಲ್ಲಿ ಸರ್ಕಸ್ ಮಾಡುತ್ತಿರುವ ಫೋಟೊ ಮೂಲಕ ಅವರು ತಮ್ಮ ಫಿಟ್‌ನೆಸ್ ಸಾಬೀತುಗೊಳಿಸುತ್ತಿರುವಂತಿದೆ. ಇದರಿಂದ ಅವರಿಗೆ ಎಷ್ಟರ ಮಟ್ಟಿಗೆ ಅವಕಾಶಗಳು ಸಿಗುತ್ತವೋ ಇಲ್ಲವೋ, ಸಾಮಾಜಿಕ ಜಾಲತಾಣಗಳ ಟ್ರೋಲ್ ಪುಟಗಳಿಗಂತೂ ಭರ್ಜರಿ ಔತಣವೇ ಸಿಕ್ಕಂತಿದೆ!





## ಹೊಸ ಚಿಗುರಿಗೆ ಪಿಆರ್‌ಕೆ ನೀರು!

ಪುನೀತ್ ಮುಖದಲ್ಲಿ ತುಂಬು ನಗೆಯಿತ್ತು. ನಡಿಯೆಯಲ್ಲಿಯೇ ಸಂಭ್ರಮವಿತ್ತು. ಅವರ ಪತ್ನಿ ಅಶ್ವಿನಿ ಕೂಡ ಆ ಸಡಗರದಲ್ಲಿ ಪಾಲುದಾರಿಕೆ ಪಡೆದು ಅತ್ತಿಂದಿತ್ತ ಓಡಾಡುತ್ತಿದ್ದರು. ಆದರೆ ಇಬ್ಬರೂ ತುಟಿಬಿಚ್ಚಬಾರದು ಎಂಬುದನ್ನು ಮೊದಲೇ ನಿರ್ಧರಿಸಿಕೊಂಡಂತೆ ನಗುವನ್ನಷ್ಟೇ ಹಂಚುತ್ತ ಸುಮ್ಮನಿದ್ದರು. ಪತ್ರಕರ್ತರ ತಿರುಗಾಗಮುರುಗಾ ಪ್ರಶ್ನೆಗಳಿಗೂ ಅವರದು ಮಂದಸ್ಮಿತದ ಉತ್ತರವೇ.

ಅದು 'ಮಾಯಾಬಜಾರ್ 2016' ಚಿತ್ರದ ಮುಹೂರ್ತ ಸಮಾರಂಭ. ರಾಧಾಕೃಷ್ಣ ರೆಡ್ಡಿ ಎಂಬ ಹೊಸ ಪ್ರತಿಭೆಯ ನಿರ್ದೇಶನದ ಈ ಚಿತ್ರವನ್ನು ಪುನೀತ್ ತಮ್ಮ 'ಪಿಆರ್‌ಕೆ ಪ್ರೊಡಕ್ಷನ್' ಮೂಲಕ ನಿರ್ಮಿಸುತ್ತಿದ್ದಾರೆ.

ಕನ್ನಡದ ಸ್ಟಾರ್ ನಟರು ಪ್ರಯೋಗಶೀಲ ಸಿನಿಮಾಗಳಲ್ಲಿ ತೊಡಗಿಕೊಳ್ಳುತ್ತಿಲ್ಲ ಎಂಬ ದೂರು ಗಟ್ಟಿಯಾಗಿ ಕೇಳಿಬರುತ್ತಿರುವ ಹೊತ್ತಿನಲ್ಲಿಯೇ ಪುನೀತ್ ರಾಜಕುಮಾರ್ ಪಿಆರ್‌ಕೆ ಪ್ರೊಡಕ್ಷನ್ ಎಂಬ ನಿರ್ಮಾಣ ಸಂಸ್ಥೆ ಆರಂಭಿಸಿ ಅಂಥದ್ದೊಂದು ಪ್ರಯತ್ನಕ್ಕೆ ಮುಂದಾಗಿದ್ದರು. ತಾವೇ ನಟಿಸದೇ, ಹೊಸ ಪ್ರತಿಭೆಗಳ ಪ್ರಯತ್ನಕ್ಕೆ ಪ್ರೋತ್ಸಾಹ ಕೊಡುವುದು ಅವರ ಉದ್ದೇಶವಾಗಿತ್ತು. ಆದ್ದರಿಂದಲೇ 'ಗೋದಿ ಬಣ್ಣ ಸಾಧಾರಣ ಮೈಕಟ್ಟು' ಸಿನಿಮಾ ಮೂಲಕ ಗಮನ ಸೆಳೆದಿದ್ದ ಹೇಮಂತ್ ರಾವ್ ಅವರ ಎರಡನೇ ಸಿನಿಮಾ 'ಕವಲು ದಾರಿ'ಗೆ ಹಣ ಹೂಡಲು ಮುಂದೆ ಬಂದರು. 'ಕವಲು ದಾರಿ' ಚಿತ್ರೀಕರಣ ಇನ್ನೇನು ಅಂತಿಮ ಹಂತದಲ್ಲಿದೆ. ಆಗಲೇ ಪುನೀತ್ ಇನ್ನೊಂದು ಹೊಸ ಪ್ರಯತ್ನಕ್ಕೆ ಹೂಡಿಕೆಯ ನೀರೆರೆಯುತ್ತಿದ್ದಾರೆ.

ರಾಧಾಕೃಷ್ಣ ಅವರು ಪುನೀತ್‌ಗೆ ಕಥೆ ಹೇಳುವಾಗ ಚಿತ್ರಕಥೆ ಸಿದ್ಧವಾಗಿರಲಿಲ್ಲ. ಘಟನೆಗಳನ್ನು ಬಿಡಬಿಡಿಯಾಗಿ ಹೇಳುತ್ತಿರುವ ಹಾಗೆಯೇ ಅರ್ಧ ಕೇಳಿದ ಪುನೀತ್ 'ಇಷ್ಟು ಸಾಕು, ನೀವು ಚಿತ್ರಕಥೆ ಸಿದ್ಧಮಾಡಿಕೊಳ್ಳಿ' ಎಂದು ಹಸಿರುನಿಶಾನೆ ತೋರಿಸಿಬಿಟ್ಟಿದ್ದಾರೆ.

ಈ ಚಿತ್ರಕ್ಕೂ ಹಳೆಯ 'ಮಾಯಾಬಜಾರ್' ಸಿನಿಮಾಗೂ ಯಾವುದೇ ಸಂಬಂಧ ಇಲ್ಲ' ಎನ್ನುವುದನ್ನೂ ಸ್ಪಷ್ಟವಾಗಿಯೇ ಹೇಳುತ್ತಾರೆ ನಿರ್ದೇಶಕರು. 2016ರಲ್ಲಿ ನಡೆದಿರುವ ಪ್ರಮುಖ ಘಟನೆಯೊಂದನ್ನು ಆಧರಿಸಿದ್ದರಿಂದ 'ಮಾಯಾಬಜಾರ್ 2016' ಎಂದುಹೆಸರಿಟ್ಟಿದ್ದಾರಂತೆ.

'ಒಂದು ಮೊಟ್ಟೆಯ ಕಥೆ' ಖ್ಯಾತಿಯ ರಾಜ್ ಶೆಟ್ಟಿ, ಪ್ರಕಾಶ್ ರೈ, ಅಚ್ಯುತ್ ಕುಮಾರ್, ಸಾಧುಕೋಕಿಲ, ಸುಧಾರಾಣಿ ಮುಂತಾದ ಘಟಾನುಘಟಿಗಳ ದಂಡೇ ಚಿತ್ರದಲ್ಲಿದೆ.

ಹೊಸ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಆರಂಭಿಸಿರುವ 'ಪಿಆರ್‌ಕೆ' ಪ್ರೊಡಕ್ಷನ್‌ನ ಪ್ರಯತ್ನ ಯಾವ ರೀತಿ ಫಲಕೊಡುತ್ತದೆ ಎನ್ನುವ ಪ್ರಶ್ನೆಗೆ ಕಾಲವೇ ಉತ್ತರಿಸಬೇಕು.

■ ಪದ್ದು